36.	ಪ್ರಾ.ಕಿ.ಶಾಲೆ, ಶಿವಪುರ	ಇರುವರು	12-7-91
37.	ಕಿ.ಪ್ರಾ.ಶಾಲೆ, ಶಿವಾರಪಟ್ಟಣ	ಇಲ್ಲ	-
38.	ಕಿ.ಪ್ರಾ.ಶಾಲೆ, ಧಾಸಡಶ್ರಮ	ಇಲ್ಲ	-
39.	ಮಾ.ಕ.ಶಾಲೆ, ಮೊಹೇಸರ	ಇರುವರು	10-12-92
40.	ಹಿ.ಪ್ರಾ. ಶಾಲೆ, ಪಟ್ಟಾತನಿ	ಇರುವರು	6-11-93
41.	ಮಾ.ಪ್ರಾ.ಶಾಲೆ,ಮೂಸಡಿಸ್ವಾಡ	ಇಲ್ಲ	-
42.	ಕಿ.ಪ್ರಾ.ಶಾಲೆ, ಕಲಗೇರಿ	ಇಲ್ಲ	-
43.	ಕಿ.ಪ್ರಾ.ಶಾಲೆ, ಮುತ್ತಿನಾಣ	ಇಲ್ಲ	-

ಬಂಟ್ವಾಳದಲ್ಲಿ ಕ್ರೀಡಾಂಗಣದ ನಿರ್ಮಾಣ

563 - ಶ್ರೀ ಬಿ. ರಮಾನಾಥ್ ರೈ (ಬಂಟ್ವಾಳ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಂಟ್ವಾಳ ತಾಲ್ಲೂಕಿನಲ್ಲಿ ಪ್ರಾರಂಭವಾಗಲಿರುವ ತಾಲ್ಲೂಕು ಕ್ರೀಡಾಂಗಣದ ನಿರ್ಮಾಣ ಈಗ ಯಾವ ಹಂತದಲ್ಲಿ ಇದೆ?

ಆ) ಇದನ್ನು ಪೂರ್ತಿಗೊಳಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) ಬಂಟ್ವಾಳ ತಾಲ್ಲೂಕಿನಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣಕ್ಕೆ 1993-94ನೇ ಸಾಲಿನಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಭೂ ಪರಿಹಾರ ಬಗ್ಗೆ ಉಚ್ಚ ನ್ಯಾಯಲಯದಿಂದ ತಡೆ ಆಜ್ಞೆ ಇರುವುದರಿಂದ ನಿರ್ಮಾಣ ಕಾರ್ಯ ಪ್ರಾರಂಭವಾಗಿರುವುದಿಲ್ಲ.

ಆ) ತಡೆ ಆಜ್ಞೆ ತೆರವು ಆದ ತಕ್ಷಣ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ

421 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಸರ್ಕಾರದವರು ಎಷ್ಟು ವರ್ಷಗಳ ನಂತರ ಸದರಿ ಶಾಲೆಗಳಿಗೆ ಅನುದಾನ ಘೋಷಣೆ ಮಾಡುತ್ತದೆ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ರಾಜ್ಯದಲ್ಲಿ ಅನುದಾನ ರಹಿತ ಪ್ರಾಥಮಿಕ ಶಾಲೆಗಳ ಸಂಖ್ಯೆ -125

ಅನುದಾನ ರಹಿತ ಪ್ರೌಢಶಾಲೆಗಳ ಸಂಖ್ಯೆ-177

ರಾಜ್ಯದಲ್ಲಿ ಒಟ್ಟು 1813 ಪ್ರಾಥಮಿಕ ಶಾಲೆಗಳು ಶಾಶ್ವತ ಅನುದಾನ ರಹಿತವಾಗಿ ಮಂಜೂರಾಗಿದ್ದು, 2498 ಪ್ರೌಢಶಾಲೆಗಳು ಶಾಶ್ವತ ಅನುದಾನ ರಹಿತವಾಗಿವೆ.

ಅ) ಸದರಿ ಶಾಲೆಗಳು ಪ್ರಾರಂಭವಾದ 7 ವರ್ಷಗಳ ಅವಧಿ ಮುಗಿದ ನಂತರ ಅನುದಾನ ಸಂಹಿತೆಯ ಎಲ್ಲಾ ನಿಯಮಗಳನ್ನು ಪಾಲಿಸಿದ್ದಲ್ಲಿ ಅನುದಾನಕ್ಕೆ ಒಳಪಡಿಸಲು ಅರ್ಹತೆ ಪಡೆಯುತ್ತವೆ. ಆದರೆ, ಈ ನಿಯಮವು ಶಾಶ್ವತ ಅನುದಾನ ರಹಿತವಾಗಿ ಮಂಜೂರಾದ ಶಾಲೆಗಳಿಗೆ ಅನ್ವಯಿಸುವುದಿಲ್ಲ.

ರಾಜ್ಯದಲ್ಲಿರುವ ವನ್ಯ ಮೃಗಗಳ ರಕ್ಷಣೆ

580 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ ಎಷ್ಟು?

ಆ) ವನ್ಯ ಮೃಗಗಳ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಮೈಸೂರು ಮೃಗಾಲಯದಲ್ಲಿ ತಪ್ಪಿಸಿಕೊಂಡಿದ್ದ ಹೆಬ್ಬಾವುಗಳು ಮತ್ತೆ ಸಿಕ್ಕಿವೆಯೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) 305

ಆ) ವನ್ಯ ಪ್ರಾಣಿ ಹಾಗೂ ಅವುಗಳ ಆವಾಸ ಸ್ಥಳಗಳಿಗೆ ರಕ್ಷಣೆ ಒದಗಿಸಲು ಹಲವಾರು ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಇ) ಸಿಕ್ಕಿವೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಾಲಕಿಯರ ಪ್ರೌಢಶಾಲೆಗಳು

581 - ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಗೊಂಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಾಲಕಿಯರ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು?

ಆ) ಅವರಿಗೆ ಊಟಕ್ಕೆ ಮತ್ತು ಬಟ್ಟೆಗೆ ಕೊಡುವ ಹಣವೆಷ್ಟು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪಂಗಡದ ವಸತಿ ಪ್ರೌಢಶಾಲೆ ಈ ಕೆಳಗಿನಂತಿವೆ :

1. **ಬೆಂಗಳೂರು ವಿಭಾಗ**
1. ಮಾಯಕೊಂಡ ಚಿತ್ರದುರ್ಗ ಜಿಲ್ಲೆ
2. **ಮೈಸೂರು ವಿಭಾಗ**
2. ನಂಜನಗೂಡು ಮೈಸೂರು ಜಿಲ್ಲೆ
3. **ಗುಲ್ಬರ್ಗಾ ವಿಭಾಗ**
3. ಗುಲ್ಬರ್ಗಾ
4. **ಬೆಳಗಾವಿ ವಿಭಾಗ**
4. ಬಾಗಲಕೋಟೆ ಬಿಜಾಪುರ ತಾಲ್ಲೂಕು